# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.788/2017

ಸಿಡಬ್ಲ್ಯೂ-5 ಪಿಡಬ್ಲ್ಯೂ- 2

| | | |
|---|---|---|
| ಹೆಸರು | : | ಶ್ರೀ ಬಸವರಾಜ |
| ತಂದೆಯ ಹೆಸರು | : | ಭೀಮಶಾ ಉಳಾಸುಗೂರ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತರು |
| ವಾಸ ಸ್ಥಳ | : | ಕಲಬುರಗಿ |

ದಿನಾಂಕ 06.02.2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ಸೇಡಂ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕ ಅಂತಾ 2011 ರಿಂದ 2013 ರವರೆಗೆ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ನಮ್ಮ ಸಾಹೇಬರು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮು.ಮಾಲು ರಾಸಾಯನಿಕ ಪರೀಕ್ಷೆ ಕುರಿತು ವಿಭಾಗಿಯ ಸಾರ್ವಜನಿಕ ವಿಶ್ಲೇಷಕರು ಕಲಬುರಗಿ ಇವರಿಗೆ ಕೊಟ್ಟು ಬರುವಂತೆ ಹೇಳಿದ್ದು ಆ ಪ್ರಕಾರ ವರದಿಯನ್ನು ಪಡೆದುಕೊಂಡು ಮು.ಮಾಲಿನೊಂದಿಗೆ ಸದರಿ ವಿಶ್ಲೇಷಕರಿಗೆ ಕೊಟ್ಟು ಬಂದಿರುತ್ತೇನೆ. ಸಾಕ್ಷಿ ವರದಿಯ ಮೇಲಿರುವ ಸಹಿಯನ್ನು ಗುರುತಿಸುತ್ತಾರೆ. ವರದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮು.ಮಾ.1 ನ್ನು ಗುರುತಿಸುತ್ತೇನೆ. ನಂತರ ದಿನಾಂಕ 26.07.2012 ರಂದು ರಾಸಾಯನಿಕ ವಿಶ್ಲೇಷಕರಿಂದ ವರದಿ ಪಡೆದುಕೊಂಡು ಅದನ್ನು ನಮ್ಮ ಸಾಹೇಬರಿಗೆ ಒಪ್ಪಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಜೆ. ಎಸ್. ಬಿ. ಆರೋಪಿ ಪರ ವಕೀಲರಿಂದ**

ನಾನು ಮು.ಮಾ.1 ನ್ನು ನಮ್ಮ ಸಾಹೇಬರಿಂದ ಪಡೆದುಕೊಂಡು ರಾಸಾಯನಿಕ ವಿಶ್ಲೇಷಕರಿಗೆ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ 26.07.2012 ರಂದು ವರದಿಯನ್ನು ಪಡೆದುಕೊಂಡು ನಮ್ಮ ಸಾಹೇಬರಿಗೆ ಒಪ್ಪಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ1 ಕ್ಕೂ ಮತ್ತು ಆರೋಪಿಗೆ ಏನು ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಯವರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH